ಓ.ಎಸ್. ನಂ.66/2016
ಪ್ರಾಸಾ : 01

ಸಾಕ್ಷಿಗೆ ಇಂದು ದಿನಾಂಕ 16/06/2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಶ್ರೀ. ಎಸ್.ಎಲ್.ಎನ್. ರವರಿಂದ : ಪ್ರತಿವಾದಿಗಳ ಪರವಾಗಿ :**

1. ನಾನು ದಾವಾ ಸ್ವತ್ತಿನ ಪಹಣಿಗಳನ್ನು 1988 ನೇ ಇಸ್ವಿಯ ಪಹಣಿಯಿಂದ ಇಲ್ಲಿಯವರೆಗೆ ನೋಡಿರುತ್ತೇನೆ. ಅದು 1988 ರಲ್ಲಿ ನನ್ನ ದೊಡ್ಡಪ್ಪನಾದ ಸಾತಪ್ಪ ನಿಂಗಪ್ಪ ಬಿರಾದಾರ ರವರ ಹೆಸರಿನಲ್ಲಿದೆ. ಸರ್ವೆ ನಂ.38/1 ರ ಪಹಣಿಯು 1994 ರಿಂದ 2000-01 ರವರೆಗೆ ನೂರಜಾನ್ ಎಂಬುವವರ ಹೆಸರಿನಲ್ಲಿತ್ತು. ಸರ್ವೆ ನಂ.178 ರ ಪಹಣಿಯು 1994 ರಿಂದ 2000-01 ರವರೆಗೆ ನನ್ನದೊಡ್ಡಪ್ಪ ಸಾತಪ್ಪ ನಿಂಗಪ್ಪ ಬಿರಾದಾರ ರವರ ಹೆಸರಿನಲ್ಲಿತ್ತು. ನಾನು ಈ ದಾವಾ ಪೂರ್ವದಲ್ಲಿ ಯಾವುದೇ ದಾವೆ ಹಾಕಿರುವುದಿಲ್ಲ.
2. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ಯಾವುದೇ ಆದೇಶವನ್ನು ಈ ಹಿಂದೆ ಪಡೆದಿರುವುದಿಲ್ಲ. ಅಸಲು ದಾವಾ ನಂ.491/1998 ರ ಆದೇಶದ ರೀತ್ಯಾ 2001 ರಿಂದ 2014 ರವರೆಗೆ ದಾವಾ ಸ್ವತ್ತುಗಳ ಖಾತೆಯು ದಾಖಲಾಗಿತ್ತು. ನನ್ನ ಹೆಸರಿನಲ್ಲಿ ದಾವಾ ದಾಖಲಿಸಿರಲಿಲ್ಲ. ನಿಂಗಪ್ಪ ಮಾತ್ರ ದಾವೆ ದಾಖಲಿಸಿದ್ದರು.
3. ನಿಪಿ-13 ರ ರೀತ್ಯಾ ನಿಂಗಪ್ಪ ತಂದೆ ಮಲ್ಲಪ್ಪ ಬಿರಾದಾರ, ಸಂಗಪ್ಪ ತಂದೆ ಮಲ್ಲಪ್ಪ ಬಿರಾದಾರ ಮತ್ತು ನಾನು ಪ್ರತಿವಾದಿಗಳ ಹೆಸರಿಗೆ ವಿಭಾಗ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಎಂ.ಆರ್.ನ್ನು ನಾನು ಹಾಜರಪಡಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ-13 ರ ದಾಖಲೆಯ ಪ್ರಕಾರ ಸದರಿ ಎಂ.ಆರ್.ನ್ನು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.
4. ಪ್ರತಿವಾದಿಗಳು ಲಿಖಿತ ಹೇಳಿಕೆ ಸಲ್ಲಿಸದೇ ಇದ್ದ ಕಾರಣ ಅಸಲು ದಾವಾ ಸಂ : 341/1998 ಡಿಕ್ರಿ ಆಗಿತ್ತು ಎಂದರೆ ಸರಿ. ಸದರಿ ಆದೇಶದ ವಿರುದ್ಧ ಗೌರವಾನ್ವಿತ ಸೀನಿಯರ್ ಸಿವ್ಹಿಲ್ ಜಡ್ಜ ನ್ಯಾಯಾಲಯ, ಇಂಡಿ ಇಲ್ಲಿಗೆ ಪ್ರತಿವಾದಿಗಳು 67/2004 ರ ರೀತ್ಯಾ ಮೇಲ್ಮನವಿ ದಾಖಲಿಸಿದ್ದು, ಮೇಲ್ಮನವಿಯಲ್ಲಿ ಡಿಕ್ರಿಯನ್ನು ವಜಾ ಮಾಡಿ

ಪ್ರತಿವಾದಿಗಳು ಲಿಖಿತ ಹೇಳಿಕೆ ಸಲ್ಲಿಸಲು ಅನುಮತಿ ನೀಡಲಾಯಿತು ಎಂದರೆ ನನಗೆ ಗೊತ್ತಿಲ್ಲ. ಮೇಲ್ಮನವಿಯು ರಿಮಾಂಡ ಆದ ನಂತರ ಗೌರವಾನ್ವಿತ ಸಿವ್ಹಿಲ್ ಜಡ್ಜ ನ್ಯಾಯಾಲಯ, ಇಂಡಿ ಇಲ್ಲಿ ದಾವಾ ವಿಚಾರಣೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ಸಾಕ್ಷಿ ಮುಂದುವರೆದು ಈ ಹಿಂದೆ ಗೊತ್ತಿರಲಿಲ್ಲ ನಂತರ ತಿಳಿಯಿತು ಎಂದು ನುಡಿಯುತ್ತಾರೆ.

5. ಈ ಹಿಂದೆ ನನ್ನ ಅಣ್ಣ ನಿಂಗಪ್ಪ ಮಲ್ಲಪ್ಪ ಬಿರಾದಾರ ದಾವಾ ದಾಖಲಿಸಿ ಅದು ವಜಾ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಆ ದಾವೆಯಲ್ಲಿ ನಾನು ಪಕ್ಷಗಾರನಲ್ಲ ಎಂದು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.
6. ಸಾತಪ್ಪ ರವರು ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ನಂತರ ಅವರ ಹೆಂಡತಿಯಾದ ಹುಸೇನಬಿ ರವರು ನಿವೃತ್ತಿ ವೇತನ ಪಡೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಲಿ ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ, ಆದರೆ ದಾವಾ ಸ್ವತ್ತಿನಲ್ಲಿ ನಾವೇ ದಾವಾ ಸ್ವಾಧೀನಾನುಭವ ಹೊಂದಿರುತ್ತೇವೆ. ದಾವಾ ದಾಖಲಿಸಿಲ್ಲವೆಂದು ಈ ಹಿಂದೆ ತಿಳಿಸಿದ್ದು, ನಿಮ್ಮ ಹೆಸರು ಖಾತೆಯಲ್ಲಿ ಹೇಗೆ ಬಂದಿತ್ತು ಎಂದರೆ ಸಾಕ್ಷಿಯು ನನ್ನ ಅಣ್ಣ ಬರೆಸಿರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ಹೆಸರಿಗೆ ಖಾತೆ ಮಾಡುವಂತೆ ಯಾವುದೇ ಸಹಿ ಮಾಡಿರುವುದಿಲ್ಲ.
7. ನಾನು ಸಾತಪ್ಪನವರಿಗೆ ಯಾವುದೇ ಹೆಂಡತಿ ಮಕ್ಕಳಿರಲಿಲ್ಲವೆಂದು ನಮ್ಮ ವಂಶಾವಳಿಯನ್ನು ತೋರಿಸುವ ಯಾವುದೇ ದಾಖಲೆಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.
8. ನಾನು ದಾವಾ ದಾಖಲಿಸುವ ಸಮಯದಲ್ಲಿ ನನ್ನ ಸಹೋದರ ನಿಂಗಪ್ಪ ಜೀವಂತವಾಗಿದ್ದರು. ಅವರ ಜೀವತ ಕಾಲದಲ್ಲಿ ನಾನು ಮತ್ತು ನನ್ನ ಸಹೋದರರು ಒಟ್ಟು ಕುಟುಂಬದಲ್ಲಿ ವಾಸ ಇರಲಿಲ್ಲ. ಮಾಹಿತಿಗಳನ್ನು ನಾನು ಸಂಬಂಧಪಟ್ಟ ಕಚೇರಿಯಿಂದ ಪಡೆದುಕೊಂಡಿರುತ್ತೇನೆ. ದಾವಾ ದಾಖಲಿಸುವ ಸಮಯದಲ್ಲಿ ನಾನು ನನ್ನ ಸಹೋದರ ನಿಂಗಪ್ಪರವರನ್ನು ಭೇಟಿಯಾಗಿದ್ದೆ. ನನ್ನ ಸಹೋದರ ನಿಂಗಪ್ಪರವರು ಪ್ರತಿವಾದಿಗಳ ಜೊತೆ ಶಾಮೀಲಾಗಿದ್ದಾರೆಂದು ತಿಳಿದು ಅವರನ್ನು ಪ್ರಸ್ತುತ ದಾವೆಯಲ್ಲಿ

ಪ್ರತಿವಾದಿಯನ್ನಾಗಿ ಮಾಡಿರುತ್ತೇನೆ. ಅಸಲು ದಾವಾ ಸಂ : 341/1998 ರಲ್ಲಿ ನಾವು ಸಹೋದರರು ಒಟ್ಟಿಗೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಹಾಜರಾಗಿದ್ದರೂ ಸಹ ಹಾಜರಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 2004 ರಲ್ಲಿಯೆ ದಾವೆಯ ಬಗ್ಗೆ ನನಗೆ ಮಾಹಿತಿ ಇದ್ದು, 2016 ರವರೆಗೆ ದಾವಾ ದಾಖಲಿಸದೇ ಇದ್ದ ಕಾರಣ ದಾವೆಯು ಕಾಲಮಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಸಾತಪ್ಪ ರವರು ಮೃತಪಟ್ಟ ನಂತರ ಪ್ರತಿವಾದಿಗಳು ಅವರ ವಾರಸುದಾರರು ಎಂದು ಖಾತೆ ದಾಖಲಾಗಿದೆ ಎಂದರೆ ಸರಿಯಲ್ಲ. ನಿಮ್ಮ ಸ್ವಾಧೀನವನ್ನು ತೋರಿಸಲು ಯಾವ ದಾಖಲೆ ಹಾಜರಪಡಿಸಿರುತ್ತೀರಿ ಎಂದು ಕೇಳಿದಾಗ ಸಾಕ್ಷಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಯಾವ ಬೆಳೆಯನ್ನು ಬೆಳೆಯುತ್ತೇವೆಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ.

10. ನಾನು ಮತ್ತು ನನ್ನ ಸಹೋದರರು ಪರಸ್ಪರ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಾತಪ್ಪರವರಿಗೆ ಪ್ರತಿವಾದಿಗಳೆ ನೇರ ವಾರಸುದಾರರು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.